# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

***ಎಸ್‌ಸಿ.*** **49/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಪ್ರಕಾಶ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ಮಹದೇವ | | **23.07.2025** |
| **ವಯಸ್ಸು** | ಃ **48 ವರ್ಷ** | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** ಃ | 3 |
| **ವಾಸಸ್ಥಳ** | ಃ ಕೂರ್ಗಳ್ಳಿ | **ಚಾ.ಸಾ.** ಃ | **6** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ನ್ಯಾಯಾಲಯದ ಮುಂದೆ ಹಾಜರಿರುವ *2* ನೇ ಆರೋಪಿ ಗೊತ್ತಿರುವುದಿಲ್ಲ, ಅದೇ ರೀತಿ ಆರೋಪಿ ಪುನೀತ ಮತ್ತು ವಿನೋದ ಗೊತ್ತಿರುವುದಿಲ್ಲ. ನನ್ನ ಬೈಕ್ ನಂಬರ್ ಕೆಎ*–09–991* ಇರುತ್ತದೆ. ನಾನು ಕೂರ್ಗಳ್ಳಿಯಲ್ಲಿ ಜಿಮ್ ಅನ್ನು ಓಪನ್ ಮಾಡಿದ್ದೆ. ಆ ಜಿಮ್ ಕ್ಲಾಸ್ ಗೆ ಹುಡುಗರು ಬರುತ್ತಿದ್ದರು. ನನ್ನ ಬೈಕ್ ಅನ್ನು ಯಾರೋ ಹುಡುಗರು ತೆಗೆದುಕೊಂಡು ಹೋಗಿದ್ದರು ಆದರೆ ಯಾರು ತೆಗೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. *2014* ನೇ ಇಸವಿಯಲ್ಲಿ ವಿಜಯನಗರ ಪೊಲೀಸರು ನನಗೆ ಫೋನ್ ಮಾಡಿ ಒಂದು ಬೈಕ್ ಇರುತ್ತದೆ ಎಂದು ತಿಳಿಸಿದ್ದರು. ನಾನು ಪೊಲೀಸ್ ಠಾಣೆಗೆ ಹೋಗಿ ನೋಡಲಾಗಿ ನನ್ನ ಬೈಕ್ ಇತ್ತು ನಾನು ಅದನ್ನು ಗುರುತಿಸಿದ್ದೆ. ಬೈಕ್ ಅನ್ನು ಯಾರಿಂದ ವಶಪಡಿಸಿಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸ್ ಠಾಣೆಯಲ್ಲಿ ನಾನು ಪುನೀತ್, ವಿನೋದ್, ವಿಷ್ಣು, ಲೊಕೇಶ್, ನಿಂಗರಾಜು ಮತ್ತು ಪ್ರದೀಪ್ ರವರನ್ನು ನೋಡಿರಲಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ನನ್ನ

ಬೈಕ್ ಪೊಲೀಸ್ ಠಾಣೆಯಲ್ಲಿ ಇರುತ್ತದೆ. ಪೊಲೀಸರು ನನ್ನ ಬೈಕ್ ಅಲ್ಲದೇ ಬೇರೆ ಬೈಕ್ ಅನ್ನು ಆ ವೇಳೆಯಲ್ಲಿ ನನಗೆ ತೋರಿಸಿರಲಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

ನ್ಯಾಯಾಲಯದ ಮುಂದೆ ಹಾಜರಿರುವ *2* ನೇ ಆರೋಪಿ ವಿಷ್ಣು, ಪುನೀತ್ , ಲೋಕೇಶ್, ನಿಂಗರಾಜು, ಅಜಯ್ ಮತ್ತು ಉಮೇಶ್ ಎಂಬವರು ನನ್ನ ಜಿಮ್ ಗೆ ಬರುತ್ತಿದ್ದರು ಕೆಲವೊಮ್ಮೆ ನನ್ನ ಬೈಕ್ ಅನ್ನು ಅವರು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ. ದಿನಾಂಕ *24.03.2014* ರಂದು ವಿಜಯನಗರ ಪೊಲೀಸ್ ಠಾಣೆಯವರು ನನ್ನನ್ನು ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ್ದರು ಎಂದರೆ ಸರಿ. ನಾನು ಅಲ್ಲಿಗೆ ಹೋದ ಮೇಲೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಆತನ ಜೊತೆಯಲ್ಲಿ ಪುನೀತ್,ವಿನೋದ್, ಲೊಕೇಶ್, ನಿಂಗರಾಜು ಮತ್ತು ಪ್ರದೀಪ್ ಪೊಲೀಸ್ ಠಾಣೆಯಲ್ಲಿ ಇದ್ದರು ಅವರನ್ನು ನನಗೆ ತೋರಿಸಿ ಸದರಿಯವರು ದಿನಾಂಕ *23.03.2014* ರ ರಾತ್ರಿ ಡಕಾಯಿತಿ ಮಾಡಲು ಕೆ.ಆರ್.ಎಸ್. ರಸ್ತೆಯ ಆಟೋಮೋಟಿವ್ ರಸ್ತೆಯ ಸರ್ಕಲ್ ಬಳಿ ಹೋಗುತ್ತಿದ್ದಾಗ ಅವರನ್ನು ಅನುಮಾನ ಬಂದು ಹಿಡಿದುಕೊಳ್ಳಲು ಪ್ರಯತ್ನಿಸಿದಾಗ ಇಬ್ಬರು ಓಡಿ ಹೋಗಿದ್ದು ಉಳಿದವರು ಸಿಕ್ಕಿರುತ್ತಾರೆ ಮತ್ತು ಅವರ ಕಡೆ ಬೈಕ್ ಗಳು ಇದ್ದು ಅವುಗಳನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಪೊಲೀಸ್ ಠಾಣೆಯಲ್ಲಿ ತೋರಿಸಿದ್ದರು ಎಂದರೆ ನನಗೆ ಗುರುತಿಸಲು ಆಗಿರುವುದಿಲ್ಲ. ಆ ದಿನ ನಾನು ನನ್ನ ಬೈಕ್ ಅನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರರಿಗೆ ಬೈಕ್ ಅನ್ನಾಗಲಿ ಅಥವಾ ಅದರ ಫೋಟೋವನ್ನಾಗಲಿ ತೋರಿಸಿ ಗುರುತಿಸಬೇಕಾಗುತ್ತದೆ ಎಂದು ಹೇಳಿ ಕಾಲವಕಾಶವನ್ನು ಕೋರಿದ್ದು ಕಾಲವಕಾಶವನ್ನು ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು. )

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು